## ಕರ್ನಾಟಕ ಸರ್ಕಾರ

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.

**ವಿಷಯ**

ಸರ್ಕಾರಿ/ಅನುದಾನಿತ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಎ.ಜಿ.ಪಿ (ಸ್ಥಾನೀಕರಣ ಪದೋನ್ನತಿ) ಹಾಗೂ ಸಿ.ಎ.ಎಸ್ ಅಡಿಯಲ್ಲಿ ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕ ಹುದ್ದೆಗೆ ಯು.ಜಿ.ಸಿ ನಿಯಮದಂತೆ ಕಾಲಕಾಲಕ್ಕೆ ಅರ್ಹತಾ ದಿನಾಂಕದಿಂದ ವೃತ್ತಿ ಪದೋನ್ನತಿಗಳನ್ನು ನೀಡದೆ ಇರುವುದು ಮತ್ತು ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರ ಬಡ್ತಿ ಪಟ್ಟಿ ಪ್ರಕಟವಾಗಿದ್ದರೂ ಆದೇಶ ನೀಡುವಲ್ಲಿ ವಿಳಂಬ ಉಂಟಾಗಿರುವ ಗಂಭೀರ ಸಮಸ್ಯೆ ಬಗ್ಗೆ.

**ಉತ್ತರ**

- ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಯುಜಿಸಿ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಅರ್ಹರಿರುವ ಪ್ರಕರಣಗಳಲ್ಲಿ ಕಾಲಾನುಕಾಲಕ್ಕೆ ನಿಯಮಿತವಾಗಿ ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಲಾಗುತ್ತಿದೆ.
- ಕಳೆದ 2020-21 ರಿಂದ ಪ್ರಸ್ತುತ ದಿನಾಂಕದವರೆವಿಗೂ ಮಂಜೂರು ಮಾಡಲಾಗಿರುವ ವಿವಿಧ ಶೈಕ್ಷಣಿಕ ಹಂತದ ಪದೋನ್ನತಿ ವಿವರ ಈ ಕೆಳಕಂಡಂತಿದೆ.

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು**

| ಕ್ರ.ಸಂ. | ಪದನಾಮ | 2020-21 ರಿಂದ ಇಲ್ಲಿಯವರೆಗೂ ಮಂಜೂರು ಮಾಡಿರುವ ವಿವಿಧ ಶೈಕ್ಷಣಿಕ ಹಂತದ ಸ್ಥಾನೀಕರಣ ವಿವರಗಳು | | | | ಒಟ್ಟು |
|---|---|---|---|---|---|---|
| | | ಶೈಕ್ಷಣಿಕ ಹಂತ 11 | ಶೈಕ್ಷಣಿಕ ಹಂತ 12 | ಶೈಕ್ಷಣಿಕ ಹಂತ 13ಎ | ಶೈಕ್ಷಣಿಕ ಹಂತ 14 | |
| 1 | ಸಹ/ಸಹಾಯಕ ಪ್ರಾಧ್ಯಾಪಕರು | 250 | 1983 | 618 | 274 | 3125 |
| 2 | ದೈಹಿಕ ಶಿಕ್ಷಣ ನಿರ್ದೇಶಕರು | 15 | 493 | 39 | 0 | 547 |
| 3 | ಗ್ರಂಥಪಾಲಕರು | 10 | 466 | 67 | 0 | 543 |
| | ಒಟ್ಟು | 275 | 2942 | 724 | 274 | 4215 |

**ಖಾಸಗಿ ಅನುದಾನಿತ ಪದವಿ ಕಾಲೇಜುಗಳು**

| ಕ್ರ.ಸಂ. | ಪದನಾಮ | 2020-21 ರಿಂದ ಇಲ್ಲಿಯವರೆಗೂ ಮಂಜೂರು ಮಾಡಿರುವ ವಿವಿಧ ಶೈಕ್ಷಣಿಕ ಹಂತದ ಸ್ಥಾನೀಕರಣ ವಿವರಗಳು | | | | ಒಟ್ಟು |
|---|---|---|---|---|---|---|
| | | ಶೈಕ್ಷಣಿಕ ಹಂತ 11 | ಶೈಕ್ಷಣಿಕ ಹಂತ 12 | ಶೈಕ್ಷಣಿಕ ಹಂತ 13ಎ | ಶೈಕ್ಷಣಿಕ ಹಂತ 14 | |
| 1 | ಸಹ/ಸಹಾಯಕ ಪ್ರಾಧ್ಯಾಪಕರು | 279 | 466 | 212 | 2 | 959 |
| 2 | ದೈಹಿಕ ಶಿಕ್ಷಣ ನಿರ್ದೇಶಕರು | 59 | 85 | 6 | 0 | 150 |
| 3 | ಗ್ರಂಥಪಾಲಕರು | 35 | 45 | 6 | 0 | 86 |
| | ಒಟ್ಟು | 373 | 596 | 224 | 2 | 1195 |

- ಸರ್ಕಾರದ ಆದೇಶ ಸಂಖ್ಯೆ: ಇಡಿ 147 ಡಿಸಿಇ 2022 (ಇ) ದಿನಾಂಕ: 08.12.2023 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳಿಗೆ ಸ್ಥಾನೀಕರಣ ಸೌಲಭ್ಯವನ್ನು "ಸದರಿಯವರು ಸಿ.ಎ.ಎಸ್. ರಡಿ ಪದೋನ್ನತಿಗೆ ಅರ್ಹತೆ ಹೊಂದಿದ ದಿನಾಂಕದಿಂದ ಸೇವಾ ಜೇಷ್ಠತೆಯನ್ನು ಪರಿಗಣಿಸಿ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯಗಳನ್ನು ಭವಿಷ್ಯವರ್ತಿಯಾಗಿ ಮಂಜೂರು ಮಾಡಲು ಆದೇಶಿಸಲಾಗಿರುತ್ತದೆ.
- 2023 ಸೆಪ್ಟೆಂಬರ್ ಮತ್ತು ತದನಂತರದಲ್ಲಿ ಶೈಕ್ಷಣಿಕ ಹಂತ 13ಎ ಮತ್ತು ಶೈಕ್ಷಣಿಕ ಹಂತ 14 ಕ್ಕೆ ಅರ್ಹರಾದ ಒಟ್ಟು 803 ಅಧ್ಯಾಪಕರುಗಳಿಗೆ ಅಕ್ಟೋಬರ್ 2023 ಅನ್ನು ಅಂತಿಮ ದಿನಾಂಕವಾಗಿ ಪರಿಗಣಿಸಿ ದಿನಾಂಕ: 06-11-2023 ರಿಂದ 02-12-2023 ರವರೆಗೆ ಮತ್ತು ದಿನಾಂಕ:18-12-2023 ರಿಂದ ದಿನಾಂಕ: 06-01-2024 ರವರೆಗೆ ಒಟ್ಟು 31 ವಿಷಯಗಳಿಗೆ ಸಂಬಂಧಿಸಿದಂತೆ ಸಂದರ್ಶನ ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ. ಸದರಿ ಅಧ್ಯಾಪಕರ ಪಿಹೆಚ್‌ಡಿ ನೈಜತೆ ಪ್ರಮಾಣ ಪತ್ರಗಳನ್ನು ರಾಜ್ಯ ಮತ್ತು ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಪಡೆದು ಆದೇಶ ಹೊರಡಿಸಲು ಕ್ರಮವಹಿಸಲಾಗಿರುತ್ತದೆ. ಈ ಮಧ್ಯೆ ದಿನಾಂಕ: 16-01-2024 ರಿಂದ ವಿಧಾನ ಪರಿಷತ್ ಚುನಾವಣಾ ನೀತಿ ಸಂಹಿತೆ ಜಾರಿಯಾಗಿರುತ್ತದೆ. ಚುನಾವಣಾ ನೀತಿ ಸಂಹಿತೆ ತೆರವುಗೊಳಸಿದ ನಂತರ ಸ್ಥಾನೀಕರಣ ಮಂಜೂರಾತಿ ಆದೇಶವನ್ನು ಹೊರಡಿಸುವ ಬಗ್ಗೆ ನಿಯಮಾನುಸಾರ ಕ್ರಮವಹಿಸಲಾಗುವುದು..

ಇಡಿ 46 ಡಿಸಿಇ 2024 (ಇ)

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು
**Dr M.C SUDHAKAR M.D.S.,**
**Minister for Higher Education**